Time : 2½ Hours

**KANNADA (T.L.)**

**Subject Code**

**S 1 3 6**

**Total No. of Questions : 10 (Printed Pages : 8) Maximum Marks : 80**

**ಸೂಚನೆ :** (*i*) ಪ್ರತಿಯೊಂದು ಪ್ರಶ್ನೆಯನ್ನು ಒಂದು ಹೊಸಪುಟದ ಮೇಲೆ ಬರೆಯಿರಿ.

(*ii*) ಪ್ರತಿ ಪ್ರಶ್ನೆಯ ಸಂಖ್ಯೆ ಮತ್ತು ಉಪಸಂಖ್ಯೆಯನ್ನು ಸ್ಪಷ್ಟವಾಗಿ ಬರೆಯಿರಿ.

(*iii*) ಎಲ್ಲ ಪ್ರಶ್ನೆಗಳನ್ನು ಬಿಡಿಸುವುದು ಅವಶ್ಯವಾಗಿದೆ.

1. (ಅ) ಈ ಕೆಳಗೆ ಕೊಟ್ಟಿರುವ ಪರ್ಯಾಯ ವಾಕ್ಯಗಳಿಂದ ಸರಿಯಾದ **ಒಂದನ್ನು** ಆರಿಸಿ ವಾಕ್ಯ ಪೂರ್ಣಮಾಡಿ ಬರೆಯಿರಿ. 2

(1) ಇನಕಮ್ ಟ್ಯಾಕ್ಸ ಅಧಿಕಾರಿಗಳು ರಮೇಶನ ಮನೆಯನ್ನು ತನಿಖೆ ಮಾಡಿದರು. ಕಾರಣ–

(*i*) ರಮೇಶನು ನಿಯಮಿತ ವೇಳೆಗೆ ಸರಕಾರಕ್ಕೆ ತೆರಿಗೆಯನ್ನು ಸಲ್ಲಿಸುತ್ತಿರಲಿಲ್ಲ.

(*ii*) ಸರಕಾರಕ್ಕೆ ರಮೇಶನ ಅಕ್ರಮ ಆದಾಯದ ಮೇಲೆ ಅನುಮಾನವಿತ್ತು.

(*iii*) ರಮೇಶನಿಗೆ ಅವನ ಹೆಸರಿನಲ್ಲಿ ಪಿತ್ರಾರ್ಜಿತ ಆಸ್ತಿಯು ಸಾಕಷ್ಟಿತ್ತು.

(2) ಸಾಮ್ರಾಟ್ ಅಶೋಕನು ತಾನು ಇನ್ನು ಮುಂದೆ ಯುದ್ಧ ಮಾಡುವದಿಲ್ಲ ವೆಂದು ಪ್ರತಿಜ್ಞೆ ಮಾಡಿದನು ಕಾರಣ–

(*i*) ರಾಜ ಅಶೋಕನಲ್ಲಿ ಸೈನ್ಯರ ಬಲ ಕಡಿಮೆಯಾಗಿತ್ತು.

(*ii*) ರಾಜನ ಅರಮನೆಯಲ್ಲಿಯ ಸಂಪತ್ತನ್ನು ದರೋಡೆಕೋರರು ದೋಚಿದ್ದರು.

(*iii*) ಕಳಿಂಗ ಯುದ್ಧದಲ್ಲಿ ಆದ ಅಪಾರ ಜನರ ಸಾವು–ನೋವುಗಳಿಂದ ಅಶೋಕನ ಮನ ನೊಂದಿತು.

(ಬ) ಕೆಳಗಿನ ಬೇಕಾದ **ನಾಲ್ಕು** ಮಾತುಗಳನ್ನು ಯಾರು ಯಾರಿಗೆ ಹೇಳಿದರು ಬರೆಯಿರಿ. 4

(*i*) 'ನಿಮ್ಮಿಂದ ನನಗೊಂದು ಸಹಾಯ ಆಗಬೇಕು ಅದಕ್ಕಾಗಿ ಬಂದಿದ್ದೇನೆ'.

(*ii*) 'ಹೌದಪ್ಪ ನಿಜವಾಗಿಯೂ ಇದುವೆ ಚಿನ್ನ!'.

(*iii*) 'ಸಾಹೇಬರೆ, ಇವರಿಗೆ ಉಳಿತಾಯ ಖಾತೆ ಪ್ರಾರಂಭಿಸುವ ವಿಧಾನ ಹೇಳಿರಿ'.

(*iv*) 'ಈ ಹುಳಗಳಿಗೆ ಚಾಕಿಹುಳ ಅಥವಾ ಲಾರ್ವಾ ಎನ್ನುತ್ತಾರೆ'.

(*v*) 'ಏ ಯಾರಪ್ಪಾ ನೀನು? ಹೆಗೆಯೊಳಗೆ ಬಿದ್ದಿರುವೆಯಲ್ಲ'.

(ಕ) ಕೆಳಗಿನ ಬೇಕಾದ **ನಾಲ್ಕು** ಪ್ರಶ್ನೆಗಳಿಗೆ **ಒಂದೊಂದೇ** ವಾಕ್ಯದಲ್ಲಿ ಉತ್ತರ ಬರೆಯಿರಿ. 4

(1) ಜೋಗ ಜಲಪಾತದಲ್ಲಿರುವ ಎರಡು ವಿದ್ಯುದಾಗಾರಗಳನ್ನು ಹೆಸರಿಸಿರಿ.

(2) ರೇಷ್ಮೆ ಹುಳಗಳ ಬೆಳವಣಿಗೆಯ ಅವಸ್ಥೆಗಳಾವುವು?

(3) ವಲ್ಲಭಬಾಯಿ ಪಟೇಲರ ತಂದೆ ತಾಯಿಗಳ ಹೆಸರೇನು?

(4) ಪರಮ ವೀರಚಕ್ರ ಪದಕದ ರಚನೆಯನ್ನು ಯಾರು ಮಾಡಿದ್ದಾರೆ?

(5) ಭೂಮಿಯಿಂದ ಸೂಮಾರು ಎಷ್ಟು ಕಿ.ಮಿ ಅಂತರದಲ್ಲಿ ಓಝೋನ್ ಪದರು ಇದೆ?

2. (ಅ) ಕಂಸದಲ್ಲಿ ಕೊಟ್ಟಿರುವ ಶಬ್ದಗಳಲ್ಲಿ ಯೋಗ್ಯವಾದ **ಒಂದನ್ನು** ಆರಿಸಿ ಕೆಳಗಿನ ಬಿಟ್ಟ ಸ್ಥಳವನ್ನು ತುಂಬಿರಿ. 2

(*i*) ಶಿವಮೊಗ್ಗ ಜಿಲ್ಲೆಯಲ್ಲಿ ............... ಎಂಬ ನದಿ ಇದೆ.
(ಕಾವೇರಿ, ಶರಾವತಿ, ಗಂಗಾ).

(*ii*) ಅಳಿಯ ಯಂಕಣ್ಣನಿಗೆ ............ ರೋಗ ವಿರುತ್ತದೆ.
(ಇರುಳುಗಣ್ಣು, ಗಳಗಂಡ, ಚರ್ಮ).

(*iii*) ಸೋಯಾಬೀನ್ ಮತ್ತು ಬೆಣ್ಣೆಯಲ್ಲಿ ............. ಪದಾರ್ಥವಿರುತ್ತದೆ.
(ಕ್ಷಾರ, ಪಿಷ್ಟ, ಸ್ನಿಗ್ಧ).

(*iv*) 1992 ರಲ್ಲಿ ಭಾರತವು ................ಒಪ್ಪಂದಕ್ಕೆ ಸಹಿ ಹಾಕಿತು.
(ಮಾಂಟ್ರಿಯಾಲ, ಜಿನೆವಾ, ಈಜಿಪ್ತ).

(ಬ) ಕೆಳಗಿನ ಬೇಕಾದ **ಮೂರು** ಪ್ರಶ್ನೆಗಳಿಗೆ **ಮೂರು-ನಾಲ್ಕು** ವಾಕ್ಯಗಳಲ್ಲಿ ಉತ್ತರ ಬರೆಯಿರಿ. 9

(1) ವಲ್ಲಭಬಾಯಿ ಪಟೇಲರ ಮನೆತನದ ವಾತಾವರಣ ಹೇಗಿತ್ತು?

(2) ಬ್ಯಾಂಕ್ ಖಾತೆಯನ್ನು ಪ್ರಾರಂಭಿಸುವ ವಿಧಾನವನ್ನು ಬರೆಯಿರಿ.

(3) ಬೌದ್ಧ ಧರ್ಮವು ವಿಪತ್ತಿಗೆ ಸಿಲುಕಿದಾಗ ಅಶೋಕನು ಏನು ಮಾಡಿದನು?

(4) ಬಡವಿಲಿಂಗದ ಕುರಿತು ಬರೆಯಿರಿ.

(ಕ) ಕೆಳಗಿನ ಬೇಕಾದ **ಒಂದು** ಪ್ರಶ್ನೆಗೆ **ನಾಲ್ಕು-ಐದು** ವಾಕ್ಯಗಳಲ್ಲಿ ಉತ್ತರ ಬರೆಯಿರಿ. 4

(1) ರಾಜು ಏಕೆ ಭಯಭೀತನಾಗಿದ್ದನು?

(2) ಜನಸಂಖ್ಯಾ ಸ್ಫೋಟದಿಂದ ಆಗುವ ಪರಿಣಾಮಗಳನ್ನು ವಿವರಿಸಿರಿ.

3. (ಅ) ಕೆಳಗಿನ ಶಬ್ದಗಳ ಅರ್ಥ ಬರೆಯಿರಿ. 2

(*i*) ಅಪೂರ್ವ

(*ii*) ಪ್ರಪಾತ

(*iii*) ಮುದನೀಡು

(*iv*) ಯುಕ್ತಿ

(ಬ) ಕೆಳಗಿನ ಶಬ್ದಗಳನ್ನು ಉಪಯೋಗಿಸಿ ಸ್ವಂತ ವಾಕ್ಯ ರಚಿಸಿ ಬರೆಯಿರಿ. 2

(*i*) ಬಲಿದಾನ

(*ii*) ರಕ್ಷಿಸು

(ಕ) ಕೆಳಗಿನ ವಾಕ್ಯಗಳಲ್ಲಿನ ವಿಶೇಷಣ ಗುರುತಿಸಿ ಬರೆಯಿರಿ. 2

(*i*) ಬೆಂಗಳೂರು ಅತಿ ಸುಂದರ ನಗರ ವಿರುತ್ತದೆ.

(*ii*) ಮಲ್ಲಿಗೆಯು ಸುವಾಸನೆ ಭರಿತ ಹೂವು.

(*iii*) ಹೋರಿಯು ದಷ್ಟಪುಷ್ಟವಾಗಿ ಬೆಳೆದು ಗೂಳಿಯಾಯಿತು.

(*iv*) ಗೋಪಾಲನು ದಯಾಳು ಸ್ವಭಾವದವನಿದ್ದನು.

(ಡ) ಕೆಳಗಿನ ಶಬ್ದಗಳ ಸಂಧಿ ವಿಗ್ರಹಿಸಿ ಬರೆಯಿರಿ. 2

(*i*) ಮಳೆಗಾಲ

(*ii*) ಗೌರೀಶ

(*iii*) ದೇವರ್ಷಿ

(*iv*) ಲೋಕೈಕ

4. (ಅ) ಕೆಳಗಿನ ಬೇಕಾದ **ನಾಲ್ಕು** ಪ್ರಶ್ನೆಗಳಿಗೆ **ಒಂದೊಂದೆ** ವಾಕ್ಯದಲ್ಲಿ ಉತ್ತರ ಬರೆಯಿರಿ. 2

(1) ಗಿಳಿಗಳ ಮಾತುಗಳು ಹೇಗಿರುತ್ತದೆ?

(2) ರಕ್ಕಸರೆಂದರೆ ಯಾರು?

(3) ಯಾವ ವಿಷಯದಲ್ಲಿ ತಾಯಿಯನ್ನು ಗೆಲ್ಲಲು ಸಾಧ್ಯವಿಲ್ಲ?

(4) ಕಲ್ಲು ಸಕ್ಕರೆ ಈ ಕವಿತೆಯನ್ನು ಯಾರು ಬರೆದಿದ್ದಾರೆ?

(5) ಹುಟ್ಟುವಾಗಿನ ಬಿದಿರಿನ ರೂಪ ಯಾವುದು?

(ಬ) ಕೆಳಗಿನ ಬೇಕಾದ **ಎರಡು** ಪ್ರಶ್ನೆಗಳಿಗೆ **ಎರಡು-ಮೂರು** ವಾಕ್ಯಗಳಲ್ಲಿ ಉತ್ತರ ಬರೆಯಿರಿ. 6

(1) ಮಾವಿನ ಮರದಲ್ಲಿ ಬೆಳೆದ ಕಾಯಿಗಳ ಗುಣಗಳನ್ನು ಬರೆಯಿರಿ.

(2) ಈ ಮಣ್ಣು ನಮ್ಮದು ಈ ಕವಿತೆಯಲ್ಲಿ ಕವಿಯು ತಂದೆ ಮತ್ತು ತಾಯಿಗೆ ಯಾವುದು ಸಮಾನವಾಗಿದೆ ಎಂದು ಹೇಳಿದ್ದಾನೆ?

(3) ನರಜನ್ಮ ಯಾವಾಗ ಸಾರ್ಥಕವಾಗುತ್ತದೆ?

5. (ಅ) ಕೆಳಗಿನ ಶಬ್ದಗಳ ವಚನ ಬದಲಿಸಿ ಬರೆಯಿರಿ. 2

(*i*) ಲೇಖಕ

(*ii*) ಪಂಡಿತರು

(*iii*) ನೀವು

(*iv*) ಸಹೋದರ

(ಬ) ಕೆಳಗಿನ ಶಬ್ದಗಳ ಲಿಂಗ ಬದಲಿಸಿ ಬರೆಯಿರಿ. 2

(*i*) ಯಜಮಾನ

(*ii*) ನಾಯಕಿ

(*iii*) ಸಾಧಕ

(*iv*) ಪತ್ನಿ

(ಕ) ಕೆಳಗಿನ ಶಬ್ದಗಳಿಗೆ ವಿರುದ್ಧಾರ್ಥಕ ಶಬ್ದಗಳನ್ನು ಬರೆಯಿರಿ. 2

(*i*) ಮಂಗಳ

(*ii*) ಇಹ ಲೋಕ

(*iii*) ಮಾನವ

(*iv*) ಸ್ವದೇಶ

(ಡ) ಕೆಳಗಿನ ಬೇಕಾದ **ಎರಡು** ಗಾದೆಮಾತುಗಳ ಸರಳ ಅರ್ಥ ಬರೆಯಿರಿ. 2

(*i*) ಮಿಂಚಿ ಹೋದ ಕಾಲಕ್ಕೆ ಚಿಂತಿಸಿ ಫಲವಿಲ್ಲ.

(*ii*) ಆಳಾಗ ಬಲ್ಲವ ಅರಸನಾಗಬಲ್ಲ.

(*iii*) ಸಜ್ಜನರ ಸಂಗ ಹೆಜ್ಜೇನು ಸವಿದಂತೆ.

(*iv*) ಗುಣ ತಿಳಿದು ಗೆಳೆತನ ಮಾಡು.

(ಇ) ಕೆಳಗಿನ ಶಬ್ದಗಳ ಸಮಾನಾರ್ಥಕ ಶಬ್ದಗಳನ್ನು ಬರೆಯಿರಿ. 2

(*i*) ಹೂವು

(*ii*) ಮಾತೆ

(*iii*) ಪರ್ವತ

(*iv*) ಸಮುದ್ರ

6. ಕೆಳಗಿನವುಗಳಲ್ಲಿ ಯಾವುದೇ **ಒಂದು** ವಿಷಯದ ಕುರಿತು **ಹದಿನೈದು-ಇಪ್ಪತ್ತು** ವಾಕ್ಯಗಳಲ್ಲಿ ನಿಬಂಧ ಬರೆಯಿರಿ. 6

(*i*) ನಾನು ಮುಖ್ಯಾಧ್ಯಾಪಕನಾದರೆ ...........

(*ii*) ಗೋವಾದ ಸಮುದ್ರತೀರ

(*iii*) ಗಡಿಯಾರದ ಆತ್ಮಕಥೆ

(*iv*) ಚಲನ ಚಿತ್ರದಿಂದಾಗುವ ಲಾಭ ಮತ್ತು ಹಾನಿ

(*v*) ಡಾ. ಸರ್ವಪಲ್ಲಿ ರಾಧಾಕೃಷ್ಣನ್

7. ಕೆಳಗಿನ ವಾಕ್ಯಾಂಶಗಳ ಸಹಾಯದಿಂದ **ಒಂದು** ಸ್ವತಂತ್ರವಾದ ಕಥೆಯನ್ನು ರಚಿಸಿ ಬರೆಯಿರಿ ಮತ್ತು ಅದಕ್ಕೆ ಯೋಗ್ಯವಾದ ತಲೆ ಬರಹ ನೀಡಿರಿ. 6

ಒಂದು ಕಾಡು — ನರಿ ಮತ್ತು ಒಂಟೆ — ನರಿ ಒಂಟೆಗೆ ಜಾತಣಕ್ಕೆ ಆಮಂತ್ರಿಸಿತು — ಕಬ್ಬಿನ ತೋಟ — ಮಧ್ಯದಲ್ಲಿ ನದಿ — ನರಿಯು ಒಂಟೆಯ ಬೆನ್ನ ಮೇಲೆ — ಕಬ್ಬಿನ ತೋಟಕ್ಕೆ ಹೋದವು — ನರಿಯು ಊಳಿಡ ತೊಡಗಿತು — ಒಂಟೆ ಬೇಡವೆಂದಿತು — ನರಿಯು ತನ್ನ ಅಭ್ಯಾಸ ವೆಂದಿತು — ರೈತರು ದೊಣ್ಣೆಯೊಂದಿಗೆ — ಒಂಟೆಗೆ ಥಳಿಸಿದರು — ಒಂಟೆ ನರಳಿತು — ಮರಳಿ ನರಿ ಒಂಟೆಯ ಬೆನ್ನ ಮೇಲೆ — ನದಿಯ ಮಧ್ಯದಲ್ಲಿ — ಒಂಟೆಯು ಮುಳುಗುವುದು ತನ್ನ ಅಭ್ಯಾಸವೆಂದಿತು — ನರಿಯು ನೀರಿನಲ್ಲಿ ಕೊಚ್ಚಿ ಕೊಂಡು ಹೋಯಿತು.

8. ಕೆಳಗಿನ ಗದ್ಯ ಭಾಗವನ್ನು ಓದಿ ಅದರ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

ಕನ್ನಡ ಸಾಹಿತ್ಯ ಲೋಕದಲ್ಲಿ ಹೆಸರುವಾಸಿಯಾಗಿದ್ದ ಶಿವರಾಮ ಕಾರಂತರ ಬಾಲ್ಯದ ವಿದ್ಯಾಭ್ಯಾಸವು ಕುಂದಾಪುರ ಜಿಲ್ಲೆಯ ಕೋಟ ಗ್ರಾಮದಲ್ಲಿ ನಡೆಯಿತು. ಮುಂದೆ ಪ್ರೌಢ ಶಿಕ್ಷಣವನ್ನು ಪಡೆದು ಕಾಲೇಜು ಶಿಕ್ಷಣಕ್ಕಾಗಿ ಮಂಗಳೂರಿನ ಸರಕಾರಿ ಕಾಲೇಜನ್ನು ಸೇರಿದರು. 1921 ರಲ್ಲಿ ಗಾಂಧೀಜಿಯವರು ಅಸಹಕಾರ ಚಳುವಳಿಯ ಸಂದೇಶ ಸಾರಲು ಮಂಗಳೂರಿಗೆ ಭೇಟಿ ನೀಡಿದರು. ಅವರ ಸಂದೇಶದ ಪ್ರಭಾವದಿಂದ

ಕಾರಂತರು ಕಾಲೇಜಿಗೆ ಶರಣು ಹೊಡೆದು ಅಸಹಕಾರ ಚಳುವಳಿಗೆ ಧುಮುಕಿದರು. ಕಾರಂತರು ಗಾಂಧೀಜಿಯವರ ವಿಚಾರ ಧಾರೆಗಳ ಪ್ರಚಾರ ನಡೆಸಿದರು. ಖಾದಿ, ಸ್ವದೇಶಿ ವಸ್ತುಗಳ ಮಾರಾಟ, ಅಸ್ಪೃಶ್ಯತಾ ನಿವಾರಣೆ, ಮಧ್ಯಪಾನ ನಿಷೇಧ ಈ ಮುಂತಾದ ರಚನಾತ್ಮಕ ಚಳುವಟಿಕೆಗಳಲ್ಲಿ ಕಾರಂತರು ತಮ್ಮನ್ನು ಸಂಪೂರ್ಣವಾಗಿ ತೊಡಗಿಸಿಕೊಂಡರು. ಇಂಥ ಹೊರಾಟದ ಹಾದಿಯಲ್ಲಿ ಅವರ ಬದುಕು ಅರಳ ತೊಡಗಿತು.

1924 ಕಾರಂತರು ತಮ್ಮ ಸಂಪಾದಕತ್ವದಲ್ಲಿ ವಸಂತ ಎಂಬ ಮಾಸಪತ್ರಿಕೆಯನ್ನು ಆರಂಭಿಸಿದರು. ಅನೇಕ ಲೇಖನಗಳನ್ನು ಬರೆದರು. ಭೂತ ಮತ್ತು ವಿಚಿತ್ರ ಕೂಟ ಎಂಬ ಎರಡು ಪತ್ತೇದಾರಿ ಕಾದಂಬರಿಗಳನ್ನು ಈ ಮಾಸಪತ್ರಿಕೆಯಲ್ಲಿ ಪ್ರಕಟಿಸಿದರು. 1936 ರಲ್ಲಿ ಕಾರಂತರು ಲೀಲಾ ಅವರನ್ನು ವಿವಾಹವಾದರು. ಎರಡು ಗಂಡು ಮತ್ತು ಎರಡು ಹೆಣ್ಣು ಮಕ್ಕಳ ತಂದೆಯಾದರು. ಬದುಕಿನೊಂದಗಿನ ಹೋರಾಟ ಮತ್ತು ಸತತವಾದ ಸಾಹಿತ್ಯ ರಚನೆಯ ಹವ್ಯಾಸಗಳನ್ನು ಮುಂದುವರೆಸಿಕೊಂಡು ಹೋದನು. ಕಾರಂತರಿಗೆ ರಂಗಭೂಮಿ, ನಾಟಕ ಮತ್ತು ನೃತ್ಯಗಳ ಮೇಲೆ ಆಸಕ್ತಿ ಇದ್ದಂತೆಯೇ ಯಕ್ಷಗಾನದ ಮೇಲೂ ಅಪಾರವಾದ ಆಸಕ್ತಿ ಹಾಗೂ ಪ್ರೀತಿ ಇತ್ತು. 1970 ರಲ್ಲಿ ಯಕ್ಷಗಾನದ ಸಾಂಪ್ರದಾಯಿಕ ಶಿಕ್ಷಣ ನೀಡುವ ಶಾಲೆಯೊಂದನ್ನು ಬ್ರಹ್ಮಾವರದಲ್ಲಿ ಆರಂಭಿಸಿದರು.

**ಪ್ರಶ್ನೆಗಳು:**

(1) ಗಾಂಧೀಜಿಯವರು ಮಂಗಳೂರಿಗೆ ಏಕೆ ಭೇಟಿ ನೀಡಿದರು? 1

(2) ಶಿವರಾಮ ಕಾರಂತರು ಯಾವ ಯಾವ ಚಟುವಟಿಕೆಗಳಲ್ಲಿ ತಮ್ಮನ್ನು ಸಂಪೂರ್ಣವಾಗಿ ತೊಡಗಿಸಿಕೊಂಡರು? 1

(3) ಕಾರಂತರು ಬರೆದ ಎರಡು ಪತ್ತೇದಾರಿ ಕಾದಂಬರಿಗಳನ್ನು ಹೆಸರಿಸಿರಿ. 1

(4) ಇವರು ಯಾರ ಜೊತೆ ವಿವಾಹವಾದರು? 1

(5) ಶಿವರಾಮ ಕಾರಂತರಿಗೆ ಯಾವುದರ ಮೇಲೆ ಅಪಾರ ಆಸಕ್ತಿ ಇತ್ತು? 1

9. ಪತ್ರ. 6

ಗಣೇಶ/ಗಿರಿಜಾ ಸಾವಂತ, ಶ್ರೀ ನಿಧಿ ನಿವಾಸ ಮನೆಯ ನಂ. 17 ಕೀರ್ತಿ ನಗರ, ಪೋಂಡಾ, ಗೋವಾ ಇವನು/ಇವಳು ತನ್ನ ನೂತನ ಗೃಹ ಪ್ರವೇಶಕ್ಕೆ ಆಮಂತ್ರಣ ಕೊಟ್ಟು ತನ್ನ ಸಹೋದರನಿಗೆ ಬರೆಯುವ ಪತ್ರದ ಮಾದರಿಯಲ್ಲಿ ಒಂದು ಪತ್ರ ಬರೆಯಿರಿ.

**ಅಥವಾ**

ಆದರ್ಶ ನಗರ, ಮಾಡೆಲ್, ಮಾಪ್ಸಾ, ಗೋವಾ ನಾಗರಿಕರು ತಮ್ಮ ವಟಾರದಲ್ಲಿ ಹೊಲಸು ಮತ್ತು ಕಸಕಡ್ಡಿಗಳಿಂದಾಗುವ ಸಮಸ್ಯೆಯನ್ನು ನಿವಾರಿಸುವ ಸಲುವಾಗಿ ಆರೋಗ್ಯಾಧಿಕಾರಿ, ಮುನಿಸಿಪಲ್ ಕಾರ್ಪೋರೇಷನ್ ಮಾಪ್ಸಾ-ಗೋವಾ ಇವರಿಗೆ ಒಂದು ಮನವಿ ಪತ್ರ ಬರೆಯಿರಿ.

10. ಕೆಳಗಿನ **ಎರಡು** ಕವಿತೆಗಳ ಸರಳ ಅರ್ಥ ಬರೆಯಿರಿ.

(ಅ) ಬೆಳಸಿಯ ತಿನ್ನುತ ಮಜ್ಜಿಗೆ ಕುಡಿಯುತ 3

ಇರುವರು ರೈತರು ಸುಖದಲ್ಲಿ

ಜೋಳನು ಕೊಯ್ಯುತ ಗೂಡನು ಹಾಕುತ

ಕುಣಿವರು ರೈತರು ಹೊಲದಲ್ಲಿ.

(ಬ) ತಿಳಿಮುಗಿಲ ತೊಟ್ಟಿಲಲಿ 3

ಮಲಗಿದ್ದ ಚಂದಿರನ

ಗಾಳಿ ಜೋಗುಳ ಹಾಡಿ ತೂಗುತ್ತಿತ್ತು

ಗರಿ ಮುದರಿ ಮಲಗಿದ್ದ

ಹಕ್ಕಿ ಗೂಡುಗಳಲ್ಲಿ

ಇರುಳ ಹೊಂಗನಸು ನೋಡುತ್ತಿತ್ತು.